ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ಪ್ರಾರಂಭ

1851-ಶ್ರೀ ಎಂ.ವಿ ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಪ್ರಶ್ನೆಗಳಿಗೆ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ಹೊಸದಾಗಿ ರೈಲು ಮಾರ್ಗಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿರುತ್ತಾಯೇ?

ಆ) ಹಾಗಿದ್ದಲ್ಲಿ, ಆ ಮಾರ್ಗಗಳು ಯಾವುವು?

ಇ) ಬೆಂಗಳೂರು ಮೈಸೂರು ರೈಲು ಮಾರ್ಗವು ಬೇಗನೆ ಮುಗಿಸುವಂತೆ ಸರ್ಕಾರದವರು ಕೇಂದ್ರಕ್ಕೆ ಒತ್ತಾಯ ತರುವರೇ?

ಈ) ಕೊಂಕಣ ರೈಲ್ವೆ ಮಾರ್ಗಕ್ಕೆ ಇದುವರೆವಿಗೂ ರಾಜ್ಯ ಸರ್ಕಾರದವರು ಒದಗಿಸಿರುವ ಹಣವೆಷ್ಟು?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ ((ಲೊಕೋಪಯೋಗಿ ಮಂತ್ರಿಗಳು)

ಅ) ಹೌದು

ಆ) ಹೊಸ ರೈಲು ಮಾರ್ಗಗಳು

1) ಹುಬ್ಬಳ್ಳಿ – ಕಾರವಾರ ರೈಲ್ವೆ ಲೈನ್

2) ಕೊಂಕಣ ರೈಲ್ವೆ (ವೆಸ್ಟ್ ಕೋಸ್ಟ್ ರೈಲ್ವೆ)

3) ಕೊಟ್ಟೂರು – ಹರಿಹರ ರೈಲ್ವೆ ಲೈನ್

4) ಚಾಮರಾಜನಗರ – ಸತ್ಯಮಂಗಲ ಮತ್ತು ಮೆಟ್ಟಪಾಳ್ಯಂ ನಡುವೆ ಹೊಸ ಬ್ರಾಡ್‌ಗೇಜ್ ಲೈನ್

5) ಹೊಸಪೇಟೆ – ಕೊಟ್ಟೂರು ರೈಲ್ವೆ ಲೈನನ್ನು ಹರಿಹರದ ವರೆಗೆ ಮುಂದುವರೆಸುವುದು.

6) ಚಿತ್ರದುರ್ಗ-ರಾಯದುರ್ಗ ರೈಲ್ವೆ ಲೈನ್ ಇತ್ಯಾದಿ

ಗೇಜ್ ಪರಿವರ್ತನೆ

1) ಬೆಂಗಳೂರು ಮೈಸೂರು ಗೇಜ್ ಪರಿವರ್ತನೆ

2) ಬೆಂಗಳೂರು ಮೀರಜ್ ನಡುವಿನ ಮೀಟರ್ ಗೇಜ್ ಲೈನನ್ನು ಬ್ರಾಡ್‌ಗೇಜಾಗಿ ಪರಿವರ್ತಿಸುವುದು.

ಇ) ಹೌದು ಒತ್ತಾಯ ತರಲಾಗಿದೆ.

ಈ) ರೂ 1,000ಗಳ ಒಂದು ಪಾಲಿನ ವಂತಿಗೆ ಮತ್ತು 20 ಕೋಟಿ ರೂಗಳ ಇಕ್ವಿಟಿ ಕಾಂಟ್ರಿಬ್ಯೂಷನ್.

ಶ್ರೀ ಎಂ.ವಿ ವೆಂಕಟಪ್ಪ: ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೊಸ ರೈಲು ಮಾರ್ಗಗಳು 6 ಹಾಗೂ ಎರಡು ಗೇಜ್ ಪರಿವರ್ತನೆ ಬಗ್ಗೆ ಕೇಳಿದ್ದೀರಿ ಆದರೆ ಬೆಂಗಳೂರು-ಬಂಗಾರಪೇಟೆ (ಚಿಕ್ಕಬಳ್ಳಾಪುರ ಕೋಲಾರ ಚಿಂತಾಮಣಿ ಮೂಲಕ) ರೈಲು ಮಾರ್ಗದ ಬಗ್ಗೆ ನಾನು ಪ್ರಥಮಬಾರಿಗೆ ಎಂಎಲ್‌ಸಿ ಆದಾಗಿನಿಂದ ಎಂದರೆ ಕಳೆದ ವರ್ಷಗಳಿಂದ ಕೇಳುತ್ತಿದ್ದೇನೆ. ಏಕೆ ಸರ್ಕಾರ ಕೋಲಾರ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದೆ?

ಶ್ರೀ ವಾಟಾಳ್ ನಾಗರಾಜ್: ಯಾವ ಸರ್ಕಾರ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ: ಕೋಲಾರ ಜಿಲ್ಲೆ ಎಂದರೆ ಮಲತಾಯಿ ಧೋರಣೆ ಎಂದು ಏನೂ ಇಲ್ಲ ಈ ಸರ್ಕಾರ ಅವರ ಕಳಕಳಿಯನ್ನು ಅರ್ಥಮಾಡಿಕೊಂಡಿದೆ. ಈ ಬಗ್ಗೆ ನಮ್ಮ ಸರ್ಕಾರ ಪ್ರಯತ್ನ ಮಾಡಿ ಕೇಂದ್ರ ಸರ್ಕಾರಕ್ಕೆ ರೆಕಮೆಂಡೇಷನ್‌ನ್ನು ಕಳುಹಿಸಿಕೊಡುತ್ತದೆ.

ಶ್ರೀ ಎಂ.ವಿ ವೆಂಕಟಪ್ಪ: ನಮ್ಮ ರಾಜ್ಯದವರೇ ರೈಲ್ವೆ ಮಂತ್ರಿಗಳು ಇರುವಾಗ ಅವರು ಬಂದಾಗ ತಾವು ಪರ್ಸನಲ್ಲಾಗಿ ಮೀಟ್ ಮಾಡಿ ನ್ಯಾರೋಗೇಜನ್ನು ಮಿಟರ್‌ಗೇಜಾಗೋ ಅಥವಾ ಬ್ರಾಡ್‌ಗೇಜಿಗೋ ಕನ್ವರ್ಟ್ ಮಾಡುವುದಕ್ಕೆ ಏರ್ಪಾಡು ಮಾಡುತ್ತಿರಾ?

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ: ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಎಲ್ಲೋ ಅರ್ಜೆಂಟಾಗಿ ಹೋಗಬೇಕಾಗಿದೆ ಎಂದು ಹೇಳಿ ಕಾಗದ ಕೊಟ್ಟು ಹೋಗಿದ್ದಾರೆ. ಶ್ರೀ ಸಿಂಧ್ಯಾ ಅವರೇ ನಿಮ್ಮ ಪ್ರಶ್ನೆ 1876 ನ್ನು ನಾಳೆ ತೆಗೆದುಕೊಳ್ಳೋಣ

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾಳೆ ತೆಗೆದುಕೊಳ್ಳೋಣ

ಅಧ್ಯಕ್ಷರು: ಈಗ ಮುಂದಿನ ಪ್ರಶ್ನೆ.

ನಂಜನಗೂಡು ತಾಲ್ಲೂಕಿನಲ್ಲಿ ನೀರು ಸರಬರಾಜು ಯೋಜನೆಗೆ ಮಂಜೂರಾದ ಮೊಬಲಗು

1816- ಶ್ರೀ ಎಂ. ಮಹದೇವ್(ನಂಜನಗೂಡು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:

ಅ) ನಂಜನಗೂಡು ತಾಲ್ಲೂಕಿನ ಮಾದನಹಳ್ಳಿ ಗುಡ್ಡ ಮೂಳ್ಳೂರುಗುಡ್ಡ ಕಡಜಟ್ಟಿ ಗುಡ್ಡಗಳಿಗೆ ರೂ 580 ಲಕ್ಷ ರೂಪಾಯಿಗಳ ಗ್ರಾಮಾಂತರ ಕುಡಿಯುವ ನೀರಿಗೆ ಸರ್ಕಾರದ ಮಂಜೂರಾತಿ ದೊರಕಿದೆಯೇ?

ಆ) ಹಾಗಿದ್ದಲ್ಲಿ, ಅದು ಇನ್ನೂ ಕಾರ್ಯಗತವಾಗಿಲ್ಲದಿರುವುದಕ್ಕೆ ಕಾರಣವೇನು?

ಇ) ಈ ಕುಡಿಯುವ ನೀರಿನ ಯೋಜನೆಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಹಿಸಿ ಕೆಲಸ ನಿರ್ವಹಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಈ) ಈ ಬಗ್ಗೆ ಪೂರ್ಣ ವಿವರದಿಂದ ಕೂಡಿದ ನಕ್ಷೆ ಅಂದಾಜು ವರದಿಗಳು ಸರ್ಕಾರದಲ್ಲಿದೆಯೇ?

ಉ) ಈ ಯೋಜನೆಗಳ ಬಗ್ಗೆ ಯಾವಾಗ ಕೆಲಸ ಪ್ರಾರಂಭಿಸಲಾಗುವುದು.

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಪೂರ್ಣ ವಿವರದಿಂದ ಕೂಡಿದ ನಕ್ಷೆ ಅಂದಾಜು ವರದಿಗಳು ಸಿದ್ದವಾಗಿರುವುದಿಲ್ಲ.

ಇ) ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ.

ಈ) ಇಲ್ಲ

ಉ) ಪೂರ್ಣ ವಿವರದಿಂದ ಕೂಡಿದ ನಕ್ಷೆ ಅಂದಾಜು ವರದಿಗಳು ಸಿದ್ದವಾಗಿ ಮಂಜೂರಾದ ನಂತರ ಕೆಲಸ ಪ್ರಾರಂಭಿಸಲಾಗುವುದು.